**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್  73/2019**

ಡಿ ಡಬ್ಲ್ಯೂ-1

**ದಿನಾಂಕ 17-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**
**ಮುಂದುವರೆದ  ಪಾಟೀ ಸವಾಲು ಶ್ರೀ ಎಲ್ ವಿ ಆರ್  ವಾದಿ  ಪರ ವಕೀಲರುಃ**

ವಾದಿಯ ತಂದೆಯ ಹೆಸರು ಬಾಪೂಜಿರಾವ್ ಎಂದರೆ ಸರಿ. ಸದರಿ ದಾವಾ ಸ್ವತ್ತನ್ನು ನಮ್ಮ ತಂದೆಯವರು ಬಾಪೂಜಿರಾವ್ ರವರಿಗೆ ಮಾರಾಟ ಮಾಡಿದ ಸಂದರ್ಭದಲ್ಲಿ ವಾದಿ ಶಂಕರವರು ಅಪ್ರಾಪ್ತರಾಗಿದ್ದರು ಎಂದರೆ ಸರಿ. ಸದರಿ ಬಾಪೂಜಿರಾವ್ ರವರು ನಮ್ಮ ತಂದೆಯವರಿಂದ ಒಟ್ಟು 2 ಎಕರೆ 22 ಗುಂಟೆ ಜಮೀನನ್ನು ದಿಃ 16-05-1966 ರಂದು ಖರೀದಿ ಮಾಡಿರುತ್ತಾರೇ ಎಂದರೆ ಸರಿ.

**2**.	ನಮ್ಮ ತಂದೆಯ ಹೆಸರು ಶಂಕರರಾವ್. ಅದೇ ರೀತಿ ನಮ್ಮ ತಂದೆ ಖರೀದಿಯಿಂದ ಖರೀದಿ ಮಾಡಿದ ಬಾಪೂಜಿರಾವ್ ರವರ ಮಗನ ಹೆಸರು ಶಂಕರರಾವ್ ಎಂದರೆ ಸರಿ. ನಮ್ಮ ತಂದೆಯ ಹೆಸರು ಮತ್ತು ವಾದಿಯ ಹೆಸರು ಎರಡೂ ಸಹ ಶಂಕರರಾವ್ ಎಂದು ನಮೂದಾಗಿರುವುದರಿಂದ ನಮ್ಮ ತಂದೆ ಮಾರಾಟ ಮಾಡಿರುವ ಜಮೀನನ್ನು ನಮ್ಮ  ಹೆಸರಿಗೆ 2014 ರಲ್ಲಿ  ಮೋಸದಿಂದ ಖಾತೆಯನ್ನು ಮಾಡಿಸಿಕೊಡಿಂದ್ದೇವೆ  ಎಂದರೆ ಸರಿಯಲ್ಲ.

**3**.	ನಮ್ಮ ತಂದೆ, ವಾದಿಯ ತಂದೆ ಬಾಪೂಜಿರಾವ್ ರವರಿಗೆ ಮಾರಾಟ ಮಾಡಿರುವ ಜಮೀನನ್ನು ಹೊರತು ಪಡಿಸಿ ನಮಗೂ ಸಹ 2 ಎಕರೆ ಉಳಿದಿರುತ್ತದೆ. ನಮ್ಮ ತಂದೆ ಮಾರಾಟ ಮಾಡಿರುವ 2 ಎಕರೆ 20 ಗುಂಟೆ ಜಮೀನಿನಲ್ಲಿ ವಾದಿ ಶಂಕರವರು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಮ್ಮ ಎರಡೂ ಎಕರೆ ಉಳಿಕೆ ಜಮೀನಿಗೆ ವಾದಿ ಶಂಕರರಾವ್ ರವರು ಯಾವುದೇ ತೊಂದರೆಯನ್ನು ಕೂಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾದಿಯವರು ಪ್ರಸ್ತುತ 1 ಎಕರೆಗೆ ದಾವೆಯನ್ನು ಸಲ್ಲಿಸಿರುತ್ತಾರೆ.

**4**. ಸರ್ವೇ ನಂಬರ 63 ಮತ್ತು 64 ಒಟ್ಟು 23 ಪೊಡುಗಳಾಗಿವೆ ಎಂದರೆ ಸರಿ. ಸ.ನಂ 63/1 ರಲ್ಲಿ 1 ಎಕರೆ, ಆದರೆ ಇತರೆ ಪೋಡುಗಳ ಜಮೀನುಗಳ ವಿಸ್ತೀರ್ಣ ನನಗೆ ಗೊತ್ತಿಲ್ಲ ಅದರೆ ಒಟ್ಟು 2 ಎಕರೆ ಇದೆ ಎಂದು ತಿಳಿಸಿರುತ್ತಾರೆ. ನ್ಯಾಯಾಲಯದ ಮುಖಾಂತರ ವಾದಿಗಳಿಗೆ ಮಾರಾಟ ಮಾಡಿರುವ 2 ಎಕರೆ 20 ಗುಂಟೆ ಜಮೀನು ಮತ್ತು ನಮಗೆ ಉಳಿದಿರುವ 2 ಎಕರೆ ಜಮೀನನ್ನು ಅಳತೆ ಮಾಡಲು ತೊಂದರೆ ಇರುವುದಿಲ್ಲ. ವಾದಿಯ ತಂದೆಗೆ ಮಾರಾಟ ಮಾಡಿರುವ 2 ಎಕರೆ 20 ಗುಂಟೇ ಜಮೀನನ್ನು ಹೊರತು ಪಡಿಸಿ ಉಳಿದ ಜಮೀನು ನಮಗೆ ಸೇರಿರುತ್ತದೆ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ